## ಚುಟುಕು ಸುದ್ದಿ

### ಪ್ರತಿಭೆ ಗುರುತಿಸಲು ಕ್ರೀಡಾಕೂಟ ಸಹಕಾರಿ: ಜಿ.ಟಿ.ದೇವೇಗೌಡ



ಉದಯಕಾಲ ನ್ಯೂಸ್

**ಮೈಸೂರು:** ಗ್ರಾಮೀಣ ಪ್ರದೇಶ ಮಕ್ಕಳ ಪ್ರತಿಭೆ ಗುರುತಿಸಲು ಶಾಲಾ ಹಂತದ ಕ್ರೀಡಾಕೂಟ ಸಹಕಾರಿಯಾಗಿದೆ ಎಂದು ಶಾಸಕ ಜಿ.ಟಿ.ದೇವೇಗೌಡ ತಿಳಿಸಿದರು.

ಚಾಮುಂಡೇಶ್ವರಿ ಕ್ಷೇತ್ರದ ದೂರ ಗ್ರಾಮದಲ್ಲಿರುವ ಮಹದೇಶ್ವರ ವಿದ್ಯಾ ಸಂಸ್ಥೆಯಲ್ಲಿ ಶುಕ್ರವಾರ ನಡೆದ ಜಯಪುರ ಹೋಬಳಿ ಮಟ್ಟದ ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿದ ಅವರು, ಕ್ರೀಡಾಕೂಟಗಳಿಂದ ವಿದ್ಯಾರ್ಥಿಗಳ ನಡುವೆ ಸಹೋದರ ಸಂಬಂಧ ಬೆಳೆಯಲಿವೆ ಎಂದರು. ಕ್ರೀಡೆಯ ಜತೆಗೆ ವಿದ್ಯಾರ್ಥಿಗಳು ಜೀವನದಲ್ಲಿ ಶಿಸ್ತು ರೂಢಿಸಿಕೊಳ್ಳಬೇಕು. ಯಾವ ವಿದ್ಯಾರ್ಥಿ ಜೀವನದಲ್ಲಿ ಶಿಸ್ತು ಬೆಳೆಸಿಕೊಳ್ಳುತ್ತಾನೋ ಭವಿಷ್ಯದಲ್ಲಿ ಉತ್ತಮ ಪ್ರಜೆಯಾಗಿ ಹೊರಹೊಮ್ಮುತ್ತಾನೆ ಎಂದರು.

ಸಮಾರಂಭದಲ್ಲಿ ಬರಡನಪುರ ಮಠದ ಪರಶಿವಮೂರ್ತಿ ಸ್ವಾಮೀಜಿಗಳು ಅಧ್ಯಕ್ಷತೆ ವಹಿಸಿದ್ದರು. ಗ್ರಾಮ ಪಂಚಾಯಿತಿ ಅಧ್ಯಕ್ಷ ಎಂ.ನಾಗರಾಜು, ವೀರಶೈವ ಮುಖಂಡ ಹಿನ್‌ಕಲ್ ಬಸವರಾಜು, ಮುಖಂಡರುಗಳಾದ ಎಂ.ಕುಮಾರ್, ನಂದೀಶ್ ಚಾಮುಂಡಯ್ಯ, ಲಾಯರ್ ಮಹೇಶ್ ಸೇರಿದಂತೆ ಹಲವಾರು ಮುಖಂಡರು ಹಾಜರಿದ್ದರು.

### ಮೀಸಲಾತಿ ಕಾರ್ಯಾಗಾರಕ್ಕೆ ಆಕ್ಷೇಪ ಮಾಜಿ ಮೇಯರ್ ಪುರುಷೋತ್ತಮ್ ಬೇಸರ

ಉದಯಕಾಲ ನ್ಯೂಸ್

**ಮೈಸೂರು:** ಮೈಸೂರು ವಿವಿ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದಲ್ಲಿ ಆ.24 ರಂದು ಆಯೋಜಿಸಿದ್ದ ಮೀಸಲಾತಿ ಮತ್ತು ವರ್ಗೀಕರಣ ವಿಷಯ ಕುರಿತ ಕಾರ್ಯಾಗಾರದ ಬಗ್ಗೆ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆಯವರು ಸಾರ್ವಜನಿಕರಲ್ಲಿ ತಪ್ಪು ಅಭಿಪ್ರಾಯ ಮೂಡಿಸುತ್ತಿದ್ದಾರೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ಬೇಸರ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರದ ನಿರ್ದೇಶಕ ಪ್ರೊ. ಜೆ.ಸೋಮಶೇಖರ್ ಅವರ ವಿರುದ್ಧ ವೇದಿಕೆಯವರು ಆಧಾರ ರಹಿತ ಆರೋಪ ಮಾಡಿದ್ದಾರೆ. ಅಲ್ಲದೆ, ಈ ಕುರಿತು ರಾಜ್ಯಪಾಲರಿಗೆ ದೂರು ಸಲ್ಲಿಸಲಾಗಿದ್ದು, ಸೋಮಶೇಖರ್ ಅವರನ್ನು ಅಮಾನತುಗೊಳಿಸಲು ಕೋರಿರುವುದಾಗಿ ತಿಳಿಸಿದ್ದಾರೆ. ಆದರೆ ಪತ್ರಿಕಾ ಗೋಷ್ಠಿ ನಡೆಸಿ ಆರೋಪ ಮಾಡಿರುವವರು ಕಾರ್ಯಾಗಾರದಲ್ಲಿ ಪಾಲ್ಗೊಂಡಿರಲಿಲ್ಲ. ಕೇವಲ ಪೂರ್ವಾಗ್ರಹದಿಂದ ಆರೋಪ ಮಾಡಿದ್ದಾರೆ. ಸೋಮಶೇಖರ್ ಅವರನ್ನು ಬೆದರಿಸುವ ಕುತಂತ್ರ ಇದಾಗಿದೆ ಎಂದರು.

ಸೋಮಶೇಖರ್ ಅವರ ವಿರುದ್ಧ ವಿವಿ ಯಾವುದೇ ಕ್ರಮ ಕೈಗೊಳ್ಳದೇ ಅಲ್ಲಿಯೇ ಮುಂದುವರಿಸಬೇಕೆಂದು ರಾಜ್ಯಪಾಲರಲ್ಲಿ ಮನವಿ ಮಾಡಲಾಗುವುದು. ಕಾರ್ಯಾಗಾರ ಬೌದ್ಧಿಕ ಚರ್ಚೆಯಿಂದ ಕೂಡಿತ್ತು. ಈ ವೇಳೆ ಸುಪ್ರೀಂಕೋರ್ಟ್ ತೀರ್ಪನ್ನು ಯಾರೊಬ್ಬರೂ ನಿಂದಿಸಲಿಲ್ಲ. ಮುಕ್ತ ಸಂವಾದವೂ ಇತ್ತು, ಬೇಕಿದ್ದರೆ ಕಾರ್ಯಾಗಾರವನ್ನು ವಿವಿಯ ಯೂಟ್ಯೂಬ್‌ನಲ್ಲಿ ವೀಕ್ಷಿಸಬಹುದಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಎನ್.ಭಾಸ್ಕರ್, ಕಾಂತರಾಜು, ಭರತ್ ರಾಮಸ್ವಾಮಿ, ಡಾ. ಚನ್ನಕೇಶವಮೂರ್ತಿ, ಶಿವಶಂಕರ್ ಉಪಸ್ಥಿತರಿದ್ದರು.



ಗುಂಡ್ಲುಪೇಟೆ ತಾಲೂಕಿನ ಬೀಚನಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಮಾನವ ಬಂಧುತ್ವ ವೇದಿಕೆ ಸಹಯೋಗದಲ್ಲಿ ಬಸವ ಪಂಚಮಿ ಆಚರಣೆ ಮಾಡಲಾಯಿತು. ಮಾನವ ಬಂಧುತ್ವ ವೇದಿಕೆ ಜಿಲ್ಲಾ ಸಂಚಾಲಕರಾದ ಸುಭಾಷ್ ಮಾಡ್ರಹಳ್ಳಿ, ಶಿಕ್ಷಕಿ ಚೈತ್ರ, ಆರ್.ಸೋಮಣ್ಣ, ಎಸ್.ಡಿ.ಎಂ.ಸಿ ಅಧ್ಯಕ್ಷ ಸಿದ್ದರಾಜಪ್ಪ, ಸ್ವಾಮಿ, ಉಲ್ಲಾಸ್, ರಾಜು, ರಾಮೇಗೌಡ, ರವಿ, ನಾರಾಯಣ್, ಮಿಮಿಕ್ರಿ ರಾಜೀವ್, ಮಹಿಳಾ ಸಂಘದ ಪ್ರತಿನಿಧಿಗಳು, ಎಸ್.ಡಿ.ಎಂ.ಸಿ ಸದಸ್ಯಗಳು ಉಪಸ್ಥಿತರಿದ್ದರು.

# ಎಂಎಸ್ಐಎಲ್ ಚಿಟ್ ಫಂಡ್ ನೂತನ ಶಾಖೆಗೆ ಚಾಲನೆ

## ಜಿಲ್ಲೆಯ ಜನರು ಶಾಖೆಯಿಂದ ಪ್ರಯೋಜನ ಪಡೆಯಿರಿ: ಸಿ.ಪುಟ್ಟರಂಗಶೆಟ್ಟಿ

ಉದಯಕಾಲ ನ್ಯೂಸ್

**ಚಾಮರಾಜನಗರ:** ಕರ್ನಾಟಕ ಸರ್ಕಾರಿ ಸ್ವಾಮ್ಯದ ಎಂ.ಎಸ್.ಐ.ಎಲ್ ಸಂಸ್ಥೆಯ ಚಿಟ್ ಫಂಡ್ ನೂತನ ಶಾಖೆಯನ್ನು ಚಾಮರಾಜನಗರದಲ್ಲಿ ಎಂಎಸ್ಐಎಲ್ ಅಧ್ಯಕ್ಷರು ಹಾಗೂ ಶಾಸಕರಾದ ಸಿ.ಪುಟ್ಟರಂಗಶೆಟ್ಟಿ ಅವರು ಉದ್ಘಾಟಿಸಿದರು.

ನಗರದ ಚಿಕ್ಕ ಅಂಗಡಿ ಬೀದಿಯ ರಂಗಶ್ರೀ ಕಾಂಪ್ಲೆಕ್ಸ್‌ನಲ್ಲಿ ನೂತನ ಚಿಟ್ ಫಂಡ್ ಶಾಖೆಗೆ ಚಾಲನೆ ನೀಡಿ ಮಾತನಾಡಿದ ಅವರು, ಚೀಟಿ ವ್ಯವಹಾರದಲ್ಲಿ ಹಣ ಹೂಡಿ ಹಲವರು ಮೋಸ ಹೋಗಿರುವ ಪ್ರಕರಣಗಳು ಇವೆ. ಆದರೆ ಎಂಎಸ್ಐಎಲ್ ಚಿಟ್ ಫಂಡ್ ಸರ್ಕಾರದ ಸಂಸ್ಥೆಯಾಗಿದ್ದು, ಇಲ್ಲಿನ ವ್ಯವಹಾರವು ಪಾರದರ್ಶಕವಾಗಿದ್ದು ಹಣಕ್ಕೆ ಭದ್ರತೆ ಇದೆ. ಇಲ್ಲಿನ ಜನರ ಆರ್ಥಿಕ ಅಭಿವೃದ್ಧಿಗೆ ಸಹಾಯಕವಾಗಲೆಂದು ಶಾಖೆ ತೆರೆಯಲಾಗಿದೆ ಎಂದರು.

ಎಂಎಸ್ಐಎಲ್ ಸಂಸ್ಥೆಯು ರಾಜ್ಯದಲ್ಲಿ 26 ಶಾಖೆಗಳನ್ನು ಈಗಾಗಲೇ



ಹೊಂದಿದ್ದು, ಚಾಮರಾಜನಗರದಲ್ಲಿ 27ನೇ ಶಾಖೆಯನ್ನು ಆರಂಭಿಸಿದೆ. ಜಿಲ್ಲೆಯ ಜನರು ನೂತನ ಚಿಟ್ ಫಂಡ್ ಶಾಖೆಯ ಪ್ರಯೋಜನ ಪಡೆಯಬೇಕು. ಅತ್ಯಂತ ವಿಶ್ವಾಸಾರ್ಹವಾಗಿರುವ ಚಿಟ್ ಫಂಡ್ ಯೋಜನೆಯನ್ನು ಸ್ವ ಸಹಾಯ ಗುಂಪುಗಳೂ ಸಹ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಪುಟ್ಟರಂಗಶೆಟ್ಟಿ ಅವರು ಸಲಹೆ ನೀಡಿದರು.

ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ ಅವರು ಮಾತನಾಡಿ, ಎಂಎಸ್ಐಎಲ್ ಚಿಟ್ ಫಂಡ್ ಸಂಸ್ಥೆಯಲ್ಲಿ ಹಣ ಹೂಡಿಕೆ ಮಾಡುವುದರಿಂದ ನಿಶ್ಚಿತವಾಗಿ ಲಾಭವಾಗಲಿದೆ. ಚಿಟ್ ಫಂಡ್‌ನಲ್ಲಿ ತೊಡಗಿಸುವ ಹಣದಿಂದ ಬರುವ ಲಾಭವನ್ನು ಒಳ್ಳೆಯ ಉದ್ದೇಶಗಳಿಗೆ ಬಳಕೆ ಮಾಡಿಕೊಳ್ಳಬೇಕು. ಇದರಿಂದ ಇನ್ನಷ್ಟು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿರುವ ಚಟುವಟಿಕೆಗಳನ್ನು ಗ್ರಾಹಕರು ಕೈಗೊಳ್ಳಬೇಕು ಎಂದರು.

ಚಾಮರಾಜನಗರ-ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮಹಮದ್ ಅಸ್ಗರ್ ಮುನ್ನ ಅವರು ಮಾತನಾಡಿ, ಜಿಲ್ಲಾ ಕೇಂದ್ರದಲ್ಲಿ ತೆರೆಯಲಾಗಿರುವ ಸರ್ಕಾರಿ ಸ್ವಾಮ್ಯದ ಚಿಟ್ ಫಂಡ್ ಸಂಸ್ಥೆಯು ಸ್ಥಳೀಯ ಜನರಿಗೆ ಅನುಕೂಲವಾಗಲಿದೆ. ಇದರ ಸದುಪಯೋಗ ಮಾಡಿಕೊಳ್ಳಬೇಕೆಂದು ತಿಳಿಸಿದರು.

ನಗರಸಭೆ ಸದಸ್ಯ ಚಂದ್ರಶೇಖರ್ ಅವರು ಮಾತನಾಡಿ, ನೂತನ ಚಿಟ್ ಫಂಡ್ ಸಂಸ್ಥೆಯು ಯಶಸ್ವಿಯಾಗಿ ಕಾರ್ಯ ನಡೆಸಲಿ. ಜಿಲ್ಲೆಯ ಜನತೆಗೆ ಹೆಚ್ಚು ಉಪಯೋಗವಾಗಲೆಂದು ಹಾರೈಸಿದರು.

ಎಂಎಸ್ಐಎಲ್‌ನ ವ್ಯವಸ್ಥಾಪಕ ಮನೋಜ್ ಕುಮಾರ್ ಅವರು ಮಾತನಾಡಿ, ರಾಜ್ಯದಲ್ಲಿ ಅಧಿಕೃತ, ಅನಧಿಕೃತ ಚಿಟ್ ಫಂಡ್‌ಗಳಿಂದ ಅಂದಾಜು 50 ಸಾವಿರ ಕೋಟಿ ರೂ. ವ್ಯವಹಾರ ನಡೆಯುತ್ತಿದೆ. ಎಂಎಸ್ಐಎಲ್ ಚಿಟ್ ಫಂಡ್ 400ಕ್ಕೂ ಹೆಚ್ಚು ಕೋಟಿ ರೂ.ಗಳ ವಹಿವಾಟು ನಡೆಸುತ್ತಿದೆ. ಮುಂಬರುವ ದಿನಗಳಲ್ಲಿ 550 ಕೋಟಿ ರೂ.ಗಳ ವಹಿವಾಟು ನಡೆಸುವ ಯೋಜನೆ ಹೊಂದಿದೆ ಎಂದು ಮಾಹಿತಿ ನೀಡಿದರು.

ಎಂಎಸ್ಐಎಲ್ ಚಿಟ್ ಫಂಡ್‌ನಲ್ಲಿಯೂ ಬ್ಯಾಂಕುಗಳು ನಡೆಸುವಂತೆ ಆನ್ ಲೈನ್ ವ್ಯವಸ್ಥೆಯನ್ನು ಸಹ ಅಳವಡಿಸಿಕೊಳ್ಳುತ್ತಿದೆ. ಗ್ರಾಹಕರಿಗೆ ಅನುಕೂಲವಾಗುವ ಅನೇಕ ತಂತ್ರಜ್ಞಾನಗಳನ್ನು ಬಳಸಿ ಇನ್ನಷ್ಟು ಸರಳವಾಗಿ ವ್ಯವಹಾರ ನಡೆಸಲು ಎಲ್ಲ ಸಿದ್ದತೆಗಳನ್ನು ಕೈಗೊಳ್ಳಲಾಗಿದೆ. ನೂತನ ಚಿಟ್ ಫಂಡ್ ಸಂಸ್ಥೆಯನ್ನು ಬೆಳೆಸುವ ಮೂಲಕ ಸಂಸ್ಥೆ ಇನ್ನಷ್ಟು ಬೆಳೆಯಲು ಜಿಲ್ಲೆಯ ಜನತೆ ಸಹಕರಿಸಬೇಕು ಎಂದು ಮನೋಜ್ ಕುಮಾರ್ ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿಎಂಎಸ್ಐಎಲ್ ಚಿಟ್ ಫಂಡ್‌ನ ಮುಖ್ಯ ಪ್ರಧಾನ ವ್ಯವಸ್ಥಾಪಕರಾದ ರಮಾಕಾಂತ್, ಡಿಸಿಎಫ್ ಡಾ. ಸಂತೋಷ್ ಕುಮಾರ್ ಸೇರಿ ಇತರರು ಉಪಸ್ಥಿತರಿದ್ದರು.

# ಹರಳೆ ಗ್ರಾ.ಪಂ ಸಾಮಾಜಿಕ ಪರಿಶೋಧನಾ ಗ್ರಾಮಸಭೆ

## ಜಾಬ್ ಕಾರ್ಡ್ ಇಲ್ಲದವರು ಗ್ರಾ.ಪಂಗೆ ಅರ್ಜಿ ಸಲ್ಲಿಸಲು ಪಿಡಿಒ ಸಲಹೆ

ಉದಯಕಾಲ ನ್ಯೂಸ್

**ಕೊಳ್ಳೇಗಾಲ:** ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯ ಬೆಂಗಳೂರು, ಜಿಲ್ಲಾ ಪಂಚಾಯತ್, ಚಾಮರಾಜನಗರ ಜಿಲ್ಲೆ, ತಾಲೂಕು ಪಂಚಾಯಿತಿ ಇವರ ನಿರ್ದೇಶನದಂತೆ ತಾಲೂಕಿನ ಹರಳೆ ಗ್ರಾಮ ಪಂಚಾಯಿತಿಯ 2023-24ನೇ ಸಾಲಿನ ಮಹಾತ್ಮ ಗಾಂಧೀಜಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಸಾಮಾಜಿಕ ಪರಿಶೋಧನಾ ಗ್ರಾಮಸಭೆಯನ್ನು ಪಂಚಾಯಿತಿ ಆವರಣದಲ್ಲಿ ಆಯೋಜಿಸಲಾಗಿತ್ತು.



ಸಭೆಯಲ್ಲಿ ಸಾಮಾಜಿಕ ಪರಿಶೋಧನಾಧಿಕಾರಿ ಸಿದ್ದಪ್ಪ ಅವರು ಮಾತನಾಡಿ, ಹರಳೆ ಗ್ರಾಮ ಪಂಚಾಯಿತಿ ನರೇಗಾ ಯೋಜನೆಯಲ್ಲಿ 77 ಕಾಮಗಾರಿಗಳನ್ನು ಮಾಡಲಾಗಿದೆ. ಈ ಕಾಮಗಾರಿಗಳಿಗೆ ಕೂಲಿ 39,19,004 ರೂ.ವ್ಯಯವಾಗಿದೆ ಎಂದು ತಿಳಿಸಿದರು.

ಸಾಮಗ್ರಿ ಮೊತ್ತ 12,30,642 ರೂಪಾಯಿ ಸೇರಿ ಒಟ್ಟು 49,49,651 ರೂಪಾಯಿಗಳು ಖರ್ಚು ಮಾಡಲಾಗಿದ್ದು, ನಡೆದಿರುವ ಕಾಮಗಾರಿಗಳಲ್ಲಿ 38 ಮನೆಗಳ ನಿರ್ಮಾಣಕ್ಕೆ 90 ಮಾನವ ದಿನಗಳಿಗೆ ಪ್ರತಿ ದಿನಕ್ಕೆ 342 ರೂ. ಕೊಡಲಾಗಿದೆ. ಕೊಟ್ಟಿಗೆ 15, ಭೌತಿಕತೋಟ 13, ಘನತ್ಯಾಜ್ಯ ವಿಲೇವಾರಿ 1, ಕಾಲುವೆ ನಿರ್ಮಾಣ 1, ಶಾಲಾ ಕಾಂಪೌಂಡ್ 1, ರಸ್ತೆ 1, ಶೌಚಾಲಯ 2, ಕೆರೆ ಅಭಿವೃದ್ಧಿ 4 ಸೇರಿದಂತಡೆ 1 ಕೃಷಿ ಹೊಂಡಾದ ಕಾಮಗಾರಿ ನಡೆದಿದೆ ಎಂದು ಮಾಹಿತಿ ನೀಡಿದರು.

ಪ್ರಸ್ತುತ ಸಾಲಿನಲ್ಲಿ ಒಟ್ಟು 77 ಕಾಮಗಾರಿಗಳನ್ನು ನಿರ್ವಹಣೆ ಮಾಡಲಾಗಿದ್ದು ಅದಕ್ಕೆ 49,49,651 ರೂ.ಗಳು ಖರ್ಚು ಮಾಡಿರುತ್ತಾರೆ. ಇದರಲ್ಲಿ ಎಲ್ಲೆಲ್ಲಿ ಕಾಮಗಾರಿಗಳು ನಡೆದಿವೆ.?, ಯಾರ್ಯಾರು ಕೂಲಿ ಕಾರ್ಮಿಕರಾಗಿ ಕೆಲಸ ಮಾಡಿದ್ದಾರೆ.?, ಯಾರ್ಯಾರು ಫಲನುಭವಿಗಳಾಗಿ ಆಯ್ಕೆಯಾಗಿದ್ದಾರೆ.?, ಯಾರ್ಯಾರಿಗೆ ಕೂಲಿ ಹಣ ತಲುಪಿದೆ ಮತ್ತು ಯಾರಿಗೆ ಹಣ ತಲುಪಿಲ್ಲ ಅಥವಾ ನಡೆದಿರುವ ಕಾಮಗಾರಿಗಳಲ್ಲಿ ಏನಾದರು ಲೋಪ ಇದೆಯಾ ಎಂಬ ವಿವರಗಳನ್ನು ಸಾರ್ವಜನಿಕರ ಮುಂದೆ ಮುಂಡಿಲು ಸಾಮಾಜಿಕ ಪರಿಶೋಧನಾ ಗ್ರಾಮ ಸಭೆಯನ್ನು ಆಯೋಜಿಸಲಾಗಿದೆ ಎಂದು ಹೇಳಿದರು.

ನಂತರ ಪಿಡಿಓ ರಾಜಮ್ಮಣಿ ಅವರು ಮಾತನಾಡಿ, ನರೇಗಾದಿಂದ ಗ್ರಾಮೀಣ ಭಾಗದ ಬಡ ಜನರ ಆರ್ಥಿಕ ಸ್ಥಿತಿಯನ್ನು ಸುಧಾರಿಸಲಿದೆ. ಆದ್ದರಿಂದ ಈ ಯೋಜನೆಯನ್ನು ಸದ್ಬಳಕೆ ಮಾಡಿಕೊಳ್ಳಬೇಕೆಂದರು. ಪಂಚಾಯಿತಿಯಿಂದ ಜಾಬ್ ಕಾರ್ಡ್‌ನ್ನು ಪಡೆದುಕೊಳ್ಳಬೇಕು. ಜಾಬ್ ಕಾರ್ಡ್ ಪಡೆದುಕೊಂಡವರಿಗೆ 100 ಮಾನವ ದಿನಗಳ ಕೂಲಿ ಕೆಲಸಕ್ಕೆ ಅವಕಾಶ ಇರುತ್ತದೆ ಎಂದರು.

ಜಾಬ್ ಕಾರ್ಡ್ ಪಡೆದುಕೊಂಡವರು ಪಂಚಾಯಿತಿಗೆ ಅರ್ಜಿ ಸಲ್ಲಿಸಿ, ತಮಗೆ ಅಗತ್ಯವಿರುವ ಕೆಲಸಗಳನ್ನು ಮಾಡಿ ಕೂಲಿ ಹಣವನ್ನು ಪಡೆದುಕೊಳ್ಳಬಹುದು, ಈಗಾಗಲೇ ಹಲವರು ಜಾಬ್ ಕಾರ್ಡ್‌ನ್ನು ಮಾಡಿಸಿಕೊಂಡು ಯೋಜನೆ ಫಲವನ್ನು ಪಡೆದುಕೊಳ್ಳುತ್ತಿದ್ದಾರೆ. ಆದ್ದರಿಂದ, ಜಾಬ್ ಕಾರ್ಡ್ ಇಲ್ಲದವರು ಪಂಚಾಯಿತಿಗೆ ಅರ್ಜಿ ಸಲ್ಲಿಸಿ ಜಾಬ್ ಕಾಡ್‌ನ್ನು ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಭೆಯಲ್ಲಿ ನೋಡಲ್ ಅಧಿಕಾರಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಸಹಾಯಕ ನಿರ್ದೇಶಕ ನಾಗೇಂದ್ರ, ಸಾಮಾಜಿಕ ಪರಿಶೋಧನಾಧಿಕಾರಿ ಸಿದ್ದಪ್ಪ, ಗ್ರಾ.ಪಂ ಅಧ್ಯಕ್ಷ ರಂಗಸ್ವಾಮಿ, ಗ್ರಾಪಂ ಸದಸ್ಯ ನಾಗರಾಜು, ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರಾಜಮಣಿ ಹಾಗೂ ಇನ್ನಿತರರು ಇದ್ದರು.

### ದಾಖಲೆಗಳ ನೋಂದಣಿ ಅಭಿಯಾನ



ಉದಯಕಾಲ ನ್ಯೂಸ್

**ಗುಂಡ್ಲುಪೇಟೆ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಮತ್ತು ವಿವಿಧ ಇಲಾಖೆಗಳ ಸಂಯುಕ್ತ ಆಶ್ರಯದಲ್ಲಿ ಆದಿವಾಸಿಗಳ ಸಬಲೀಕರಣ ಹಾಗೂ ಬುಡಕಟ್ಟು ಸಮುದಾಯಗಳ ಶ್ರೇಯೋಭಿವೃದ್ಧಿ ಕಾರ್ಯಕ್ರಮಗಳು-2024ರ ಹಿನ್ನೆಲೆ ನೈಜ ದುರ್ಬಲ ಬುಡಕಟ್ಟು ಸಮುದಾಯಗಳಿಗೆ ಸರ್ಕಾರದ ಮೂಲಭೂತ ದಾಖಲೆಗಳ ನೋಂದಣಿ ಮಹಾ ಅಭಿಯಾನ ನಡೆಸಲಾಯಿತು.

ಬುಡಕಟ್ಟು ನಿವಾಸಿಗಳಿಗೆ ಆಧಾರ್ ಕಾರ್ಡ್, ಜನ್‌ಧನ್ ಬ್ಯಾಂಕ್ ಖಾತೆ, ಆರೋಗ್ಯ ಕಾರ್ಡ್, ಆದಾಯ ಪ್ರಮಾಣ ಪತ್ರ, ಹಾಗೂ ಕಿಸಾನ್ ಸಮ್ಮಾನ್ ಪತ್ರಗಳ ದಾಖಲೆಗಳನ್ನು ಮಾಡಿಸಿ ಕೊಡುವ ನಿಟ್ಟಿನಲ್ಲಿ ನೋಂದಣಿ ಕಾರ್ಯಕ್ರಮದ ಮಹಾ ಅಭಿಯಾನವನ್ನು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳಾದ ಬಿಂದ್ಯಾ ಎಚ್.ಎಸ್ ನೇತೃತ್ವದಲ್ಲಿ ತಾಲೂಕಿನ ಬಂಡೀಪುರ ಅರಣ್ಯ ಅಂಚಿನ ಮೇಲುಕಮನಹಳ್ಳಿ ಹಾಡಿ ನಿವಾಸಿಗಳ ಮನೆ ಮನೆಗೆ ಭೇಟಿ, ನೀಡುವ ಮೂಲಕ ಕಾರ್ಯಕ್ರಮ ನಡೆಸಲಾಯಿತು.

ಈ ಸಂದರ್ಭದಲ್ಲಿ ತಾಲೂಕು ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಮೋಹನ್ ಕುಮಾರ್, ಗ್ರಾಮ ಲೆಕ್ಕಾಧಿಕಾರಿ ಅರುಣ್ ಕುಮಾರ್ ಸೇರಿದಂತೆ ಇಲಾಖೆಯ ಸಿಬ್ಬಂದಿ ವರ್ಗ ಇತರರು ಹಾಜರಿದ್ದರು.

# ಬಂಡೀಪುರ ವ್ಯಾಪ್ತಿಯ ಗುಡ್ಡಗಾಡು ನಿವಾಸಿಗಳ ಆರೋಗ್ಯ ತಪಾಸಣೆ

ಉದಯಕಾಲ ನ್ಯೂಸ್

**ಗುಂಡ್ಲುಪೇಟೆ:** ತಾಲೂಕು ಆರೋಗ್ಯ ಅಧಿಕಾರಿ ಡಾ.ಅಲೀಮ್ ಪಾಷಾ ನೇತೃತ್ವದ ಸಿಬ್ಬಂದಿಗಳ ತಂಡ ಬಂಡೀಪುರ ಅರಣ್ಯ ಭಾಗದ ಮಂಗಳ ಗ್ರಾಮದ ಆರೋಗ್ಯ ಕೇಂದ್ರದ ವ್ಯಾಪ್ತಿಯ ಆಡಿನಕಣಿವೆ ಗುಡ್ಡಗಾಡು ಪ್ರದೇಶದ ಹಾಡಿ ನಿವಾಸಿಗಳ ಮನೆಗಳಿಗೆ ಭೇಟಿ ನೀಡುವ ಮೂಲಕ ನಿವಾಸಿಗಳ ಆರೋಗ್ಯ ತಪಾಸಣೆ ನಡೆಸಿದರು.



ಬಳಿಕ ಮಾತನಾಡಿದ ಆರೋಗ್ಯಾಧಿಕಾರಿ ಡಾ.ಅಲೀಮ್ ಪಾಷಾ ಅವರು, ಈ ಗ್ರಾಮದ 34 ಮನೆಗಳಿಗೆ ಭೇಟಿ ನೀಡಿ, 112 ನಿವಾಸಿಗಳ ಆರೋಗ್ಯ ತಪಾಸಣೆ ನಡೆಸಲಾಗಿದ್ದು, ತಪಾಸಣೆ ವೇಳೆ 5 ಜನರಿಗೆ ನೆಗಡಿ, ಕೆಮ್ಮು ಹಾಗೂ ಜ್ವರ ಕಾಣಿಸಿಕೊಂಡಿದ್ದು ಅವರುಗಳಿಗೆ ಸೂಕ್ತ ಚಿಕಿತ್ಸೆ ನೀಡಿದ್ದರಿಂದ ಅವರ ಆರೋಗ್ಯದಲ್ಲಿ ಚೇತರಿಕೆ ಕಂಡು ಬಂದಿದೆ ಎಂದರು.

ಇದೇ ವೇಳೆ ಶುದ್ಧ ಕುಡಿಯುವ ನೀರು, ಸಾಂಕ್ರಾಮಿಕ ರೋಗಗಳ ಬಗ್ಗೆ ಹಾಗೂ ಕೀಟಜನ್ಯ ರೋಗಗಳ ಬಗ್ಗೆ ಹಳ್ಳಿಯ ಸ್ಥಳೀಯ ನಿವಾಸಿಗಳಿಗೆ ಆರೋಗ್ಯ ಶಿಕ್ಷಣ ನೀಡಲಾಗಿದೆ ಎಂದು ತಿಳಿಸಿದರು.

ಇದೆ ಆ.20 ರಿಂದ 25ನೇ ತಾರೀಕಿನಂದು ಹಾಡಿ ನಿವಾಸಿಗಳ ಪೈಕಿ ಬಸಮ್ಮ ಹಾಗೂ ಗುರುಮಲ್ಲಯ್ಯ ಇವರುಗಳು ಸ್ವಾಭಾವಿಕ ಮರಣ ಹೊಂದಿದ್ದು, ಕಾಳಪ್ಪ ಇವರು ಮದ್ಯಪಾನ ಸೇವನೆಯಿಂದ ಉಂಟಾದ ಲಿವರ್ ಸಮಸ್ಯೆಯಿಂದ ಮರಣ ಹೊಂದಿದ್ದಾರೆ. ಈ ಹಿನ್ನಲೆಯಲ್ಲಿ ಮಂಗಲ ಗ್ರಾ.ಪಂ ಅಧಿಕಾರಿಗಳಿಗೆ ಜನರ ಆರೋಗ್ಯದ ಹಿತದೃಷ್ಟಿಯಿಂದ ಶುದ್ಧ ಕುಡಿಯುವ ನೀರಿನ ಪೂರೈಕೆ ಹಾಗೂ ನೈರ್ಮಲ್ಯ ಕಾಪಾಡುವಂತೆ ಮನವಿ ಮಾಡಿದರು.

ಅರಣ್ಯ ವ್ಯಾಪ್ತಿಯ ಗ್ರಾಮಗಳ ಮತ್ತು ಹಾಡಿ ನಿವಾಸಿಗಳ ಆರೋಗ್ಯದ ಹಿತ ದೃಷ್ಟಿಯ ಮೇರೆಗೆ ಆರೋಗ್ಯ ಇಲಾಖೆ ಸಿಬ್ಬಂದಿಗಳು ಅವರ ಮನೆ ಮನೆಗೆ ಭೇಟಿ ನೀಡಿ, ಅವರ ಆರೋಗ್ಯ ವಿಚಾರಿಸಿದ್ದು, ಸಾಂಕ್ರಾಮಿಕ ರೋಗಗಳ ಅರಿವು ಮೂಡಿಸುವ ಜೊತೆಗೆ ಆರೋಗ್ಯ ತಪಾಸಣೆಯನ್ನು ಸಹ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಸ್ವಾಮಿ.ಎಂ, ಮಂಗಳ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಧಿಕಾರಿ ಡಾ.ಪ್ರವೀಣ್, ಎಸ್.ಬಾಲಾಜಿ ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿ ವರ್ಗ, ಅಂಗನವಾಡಿ ಕಾರ್ಯಕರ್ತೆಯರು ಸೇರಿದಂತೆ ಇತರರಿದ್ದರು.

### ವ್ಯಕ್ತಿಯೊಬ್ಬರಿಗೆ ಯಶಸ್ವಿ ಮೂತ್ರಪಿಂಡ ಕಸಿ




ಉದಯಕಾಲ ನ್ಯೂಸ್

**ಮೈಸೂರು:** ನಾರಾಯಣ ಆಸ್ಪತ್ರೆಯಲ್ಲಿ ಮೂತ್ರಪಿಂಡ ಕಸಿ ಸೇವೆ ಆರಂಭಿಸಿದ್ದು, ಸುಮಾರು 60 ವರ್ಷ ವಯಸ್ಸಿನ ವ್ಯಕ್ತಿಯೊಬ್ಬರಿಗೆ ಯಶಸ್ವಿಯಾಗಿ ಮೂತ್ರಪಿಂಡ ಕಸಿ ಮಾಡಲಾಗಿದೆ ಎಂದು ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ.ಎಂ.ಎನ್. ರವಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಮಾರು ಒಂದು ವರ್ಷದ ಹಿಂದೆ ಆಸ್ಪತ್ರೆ ವತಿಯಿಂದ ನಾಗಮಂಗಲದಲ್ಲಿ ಆಯೋಜಿಸಿದ್ದ ಆರೋಗ್ಯ ಶಿಬಿರದಲ್ಲಿ ವ್ಯಕ್ತಿಯೊಬ್ಬರು ಪಾಲ್ಗೊಂಡಿದ್ದರು. ನಂತರ ಹೆಚ್ಚಿನ ಪರೀಕ್ಷೆಗೆ ಒಳಪಡಿಸಿದಾಗ ಅವರ ಮೂತ್ರಪಿಂಡಗಳು ವಿಫಲವಾಗಿರುವುದು ಗಮನಕ್ಕೆ ಬಂದಿತ್ತು. ತಕ್ಷಣ ಡಯಾಲಿಸಿಸ್ ಆರಂಭಿಸಿದರೂ, ಅವರು ಶಾಶ್ವತ ಪರಿಹಾರ ಬಯಸಿದರಲ್ಲದೆ, ಈ ಕಾರಣದಿಂದಾಗಿ ಅವರ ಕಿರಿಯ ಸಹೋದರ ಸ್ವಪ್ರೇರಣೆಯಿಂದ ಮೂತ್ರಪಿಂಡ ದಾನ ಮಾಡಲು ಮುಂದೆ ಬಂದರು. ಹೀಗಾಗಿ ಕಳೆದ ಜು.8ರಂದು ಡಾ.ಸಂಜಯ್‌ರಾವ್, ಡಾ.ಎಂ.ಪ್ರಶಾಂತ್ ಕುಲಕರ್ಣಿ, ಡಾ.ಎಸ್.ನಾಗೇಶ್, ಡಾ.ಎಸ್.ನಿತೇಶ್ ತಂಡ ಯಶಸ್ವಿಯಾಗಿ ಮೂತ್ರಪಿಂಡ ಕಸಿ ಮಾಡಿದೆ. ಇದೀಗ ರೋಗಿ ಆರೋಗ್ಯವಾಗಿದ್ದಾರೆ ಎಂದು ಮಾಹಿತಿ ಹಂಚಿಕೊಂಡರು. ಸುದ್ದಿಗೋಷ್ಠಿಯಲ್ಲಿ ಡಾ.ಕೆ.ವೈ.ಯಶವಂತಕುಮಾರ್, ಡಾ.ಎಸ್.ನಿತೇಶ್ ಉಪಸ್ಥಿತರಿದ್ದರು.

# ಆಹಾರವನ್ನು ವ್ಯರ್ಥ ಮಾಡುವ ಅಧಿಕಾರ ಯಾರಿಗೂ ಇಲ್ಲ

## ಸುಭಾಷ್ ಮಾಡ್ರಹಳ್ಳಿ ಅಭಿಮತ | ಮೂಢ ನಂಬಿಕೆ ತೊಲಗಿಸಲು ಕರೆ

ಉದಯಕಾಲ ನ್ಯೂಸ್

**ಗುಂಡ್ಲುಪೇಟೆ:** ಆಹಾರ ಸಂಪತ್ತನ್ನು ವ್ಯರ್ಥ ಮಾಡುವ ಅಧಿಕಾರ ಯಾರಿಗೂ ಇಲ್ಲ ಎಂದು ಮಾನವ ಬಂಧುತ್ವ ವೇದಿಕೆ ಜಿಲ್ಲಾ ಸಂಚಾಲಕರಾದ ಸುಭಾಷ್ ಮಾಡ್ರಹಳ್ಳಿ ಅಭಿಪ್ರಾಯ ಪಟ್ಟರು.

ಪಟ್ಟಣದ ಸಿ.ಎಂ.ಎಸ್ ಮಕ್ಕಳ ಮನೆಯ ಸಭಾಂಗಣದಲ್ಲಿ ಮಾನವ ಬಂಧುತ್ವ ವೇದಿಕೆ, ಕರ್ನಾಟಕ ಕಾವಲು ಪಡೆ, ಕರ್ನಾಟಕ ರಕ್ಷಣಾ ವೇದಿಕೆ, ಮಹಾ ನಾಯಕ ಶ್ರೇಯೋಭಿವೃದ್ಧಿ ಸಂಘ ಇವರುಗಳ ಸಂಯುಕ್ತಾಶ್ರಯದಲ್ಲಿ ನಾಗರ ಪಂಚಮಿ ಅಂಗವಾಗಿ ಆಯೋಜಿಸಲಾಗಿದ್ದ ಬಸವ ಪಂಚಮಿ ಕಾರ್ಯಕ್ರಮದಲ್ಲಿ ಹಾಲು ಮತ್ತು ಇನ್ನಿತರ ತಿನಿಸುಗಳನ್ನು ವಿತರಿಸಿ ಮಾತನಾಡಿದರು.




ನಾಗರ ಪಂಚಮಿ ಹಾಗೂ ಷಷ್ಠಿ ಹಬ್ಬಗಳಲ್ಲಿ ಹುತ್ತಕ್ಕೆ ಹಾಲು ಹಾಕುವುದು ಮೂಢ ನಂಬಿಕೆಯಾಗಿದೆ. ವೈಜ್ಞಾನಿಕ ಹಾಗೂ ವೈಚಾರಿಕ ಕೊರತೆಯಿಂದ ಇಂತಹ ಮೌಢ್ಯತೆ ಬೆಳೆದು ಬಂದಿವೆ. ಹಬ್ಬದ ಹೆಸರಿನಲ್ಲಿ ಹಾಲನ್ನು ಹುತ್ತಕ್ಕೆ, ಕಲ್ಲು ನಾಗರಗಳಿಗೆ ಸುರಿಯುವುದರಿಂದ ಪೌಷ್ಟಿಕ ಆಹಾರ ವ್ಯರ್ಥವಾಗುತ್ತದೆ ಎಂದು ತಿಳಿಸಿದರು.

ಹಾವುಗಳು ಹಾಲು ಕುಡಿಯುವುದಿಲ್ಲ ಅವುಗಳು ಆಹಾರ ಇಲಿ, ಕಪ್ಪೆ ಬೇಟೆಯಾಡಿ ತಿನ್ನುತ್ತವೆ. ಹಾವುಗಳು ಸಸ್ಯಾಹಾರಿ ಜೀವಿಯಲ್ಲ ಹಾಗೂ ದ್ರವ ಪದಾರ್ಥಗಳನ್ನು ಸೇವಿಸುವುದಿಲ್ಲ ಎಂಬುದನ್ನು ತಿಳಿಯಬೇಕು. ಹುತ್ತಕ್ಕೆ ಹಾಲನ್ನೆರೆಯುವುದನ್ನು ನಿಲ್ಲಲಿ. ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳಿಗೆ, ವಯೋವೃದ್ಧರಿಗೆ ಹಂಚಬೇಕು. ಭಾರತದಲ್ಲಿ ಅಪೌಷ್ಟಿಕತೆಯಿಂದ ನರಳುತ್ತಿರುವ ಮಕ್ಕಳ ಸಂಖ್ಯೆ ಜಗತ್ತಿನಲ್ಲಿ ಮೊದಲ ಸ್ಥಾನದಲ್ಲಿದೆ ಎಂದು ವಿಷಯ ಮನವರಿಕೆ ಮಾಡಿದರು.

ಅಪೌಷ್ಟಿಕ ಸಮಸ್ಯೆಯನ್ನು ಹಿಮ್ಮೆಟ್ಟಿಸಿ, ಸಶಕ್ತ ದೇಶ ಕಟ್ಟಲು ದೇಶದ ಪ್ರಜೆಗಳು ಉತ್ತಮ ಆರೋಗ್ಯ ಹೊಂದಿರಬೇಕಾಗಿದೆ. ಆಹಾರ ರಾಷ್ಟ್ರೀಯ ಸಂಪತ್ತು ಹಾಗೂ ತಿನ್ನುವ ಆಹಾರವನ್ನು ವ್ಯರ್ಥ ಮಾಡುವ ಅಧಿಕಾರ ಯಾರಿಗೂ ಇಲ್ಲ, ಆಹಾರದ ಅಗತ್ಯ ಇರುವವರಿಗೆ ನೀಡುವ ಮೂಲಕ ಅವರಿಗೆ ಆಸರೆಯಾಗಬಹುದು ಎಂದು ಕಿವಿಮಾತು ಹೇಳಿದರು. ಸಬ್ ಇನ್ಸ್‌ಪೆಕ್ಟರ್ ಪ್ರಭುಸ್ವಾಮಿ ಅವರು ಮಾತನಾಡಿ, ಹಸಿವು ಬಡವರ ದೊಡ್ಡ ಶತ್ರು ಅದನ್ನು ನಿವಾರಿಸುವುದು ನಮ್ಮೆಲ್ಲರ ಜವಾಬ್ದಾರಿ. ಬಡವರ ಕಷ್ಟದಲ್ಲಿ ಅವರೊಂದಿಗೆ ನಿಲ್ಲುವುದೆ ನಿಜವಾದ ದೇವರ ಕೆಲಸವಾಗಿದೆ. ಆ ನಿಟ್ಟಿನಲ್ಲಿ ಮಾನವ ಬಂಧುತ್ವ ವೇದಿಕೆ ಸಾರ್ಥಕ ಹಾದಿಯಲ್ಲಿ ಮುನ್ನಡೆಯುತ್ತಿದೆ ಎಂದು ಪ್ರಶಂಸಿದರು.

ಈ ಸಂದರ್ಭದಲ್ಲಿ ಮಾನವ ಬಂಧುತ್ವ ವೇದಿಕೆ ತಾಲೂಕು ಸಂಚಾಲಕ ಆರ್.ಸೋಮಣ್ಣ, ಗ್ರಾಮ ಪಂಚಾಯತಿ ಸದಸ್ಯ ಮಹಾ ಒಕ್ಕೂಟದ ಕಾರ್ಯದರ್ಶಿ ಆರ್.ಡಿ.ಉಲ್ಲಾಸ್, ಕರವೇ ಅಧ್ಯಕ್ಷ ಪಿ.ರಾಜೇಂದ್ರ, ಸ್ವಾಮಿ ಹುಲಸಗುಂದಿ, ಕಾವಲು ಪಡೆಯ ಅಧ್ಯಕ್ಷ ಅಬ್ದುಲ್ ಮಾಲಿಕ್, ರಾಮೇಗೌಡ, ರಮೇಶ್ ನಾಯಕ್, ಮುಬಾರಕ್, ಕಾಳಿಂಗಸ್ವಾಮಿ ಸಿದ್ದಾರ್ಥ, ಪೋಲಿಸ್ ಇಲಾಖೆಯ ಮಹೇಶ್, ಸಿಎಂಎಸ್ ಸಂಸ್ಥೆಯ ವ್ಯವಸ್ಥಾಪಕ ಸೆಲ್ವರಾಜ್, ಕಾರ್ತಿಕ್ ಗೌಡ, ವಕೀಲ ಕಾಂತರಾಜ್, ಸಾಧಿಕ್ ಪಾಷಾ, ನಿಸರ್ಗ ನಾಗರಾಜ್, ರಾಜು ಅಗತಗೌಡನಹಳ್ಳಿ, ನಾರಾಯಣ್, ಕೆ.ಎಂ.ಮನಸ್, ರವಿ ಶಿವಪುರ, ಮಿಮಿಕ್ರಿ ರಾಜೀವ್ ಹಾಗೂ ಸಂಸ್ಥೆಯ ವಿದ್ಯಾರ್ಥಿಗಳು ಹಾಜರಿದ್ದರು.




Udayakala printed and published by **K.N.Puttalingaiah** on behalf of **Anikethana Publication and Printers** and Printed at M.N.S. PRINTERS PVT LTD. 345/4, Bhattarahalli Near K R Puram, RTO Old Madras Road, Bengaluru- 560049 and also printed at Elegant Offset Printers Pvt Ltd impression Building 3360/4, Gondi halli galli Belagavi-590001, Manipal Media Network Ltd. Sy No. 7/2, Plat No. Ca-3/1, 28(D) &29 Kapnoor 2nd Stage, Industrial Area, Kapnoor Village Kalaburagi Taluka Kalaburagi, ELEGANT OFFSET PRINTERSPVT LTD Plat No-33/1, 15/1 (Eastern Part) MT Sagar Industrial Estate Gokul Road Hubballi -580030 and Published at no 1576, Rame Gowda Building, 2nd floor, V.V.Road, Mandya-571 401. ELEGANT OFFSET PRINTERS PVT LTD, SHREE LAKSHMINARAYANA RICE MILL SHREE SHANKARMUTT ROAD, SHIMOGA- 577 201 **Editor: K N Puttalingaiah: 9742623551** (Responsible for all the news printed). All rights reserved. Reproduction in whole or in part without written permission is prohibited.RNI REG NO. 71090/97.Volume:**28** Issue: **87**